


## ವಾಟ್ಸ್ ಆ್ಯಪ್ ಶಿಕ್ಷಣ

ನಗರ ಪ್ರದೇಶದ ಹೈ–ಫೈ ಶಾಲೆಗಳಂತೆ ಪೂರ್ಣಪ್ರಮಾಣದಲ್ಲಿ ಆನ್‌ಲೈನ್ ವ್ಯವಸ್ಥೆ ರೂಢಿಸಿಕೊಳ್ಳದಿದ್ದರೂ ಕೆಲವು ಶಾಲೆಗಳು ನಿತ್ಯದ ಪಾಠಗಳಿಗೆ ವಾಟ್ಸ್ ಆ್ಯಪ್ ಹಾದಿ ತುಳಿದಿವೆ. ಆಯಾ ತರಗತಿಗಳ ವಾಟ್ಸ್ ಆ್ಯಪ್ ಗ್ರೂಪ್‌ಗಳನ್ನು ರಚಿಸಲಾಗಿದ್ದು, ಪ್ರತಿದಿನ ಮಕ್ಕಳು ಏನು ಮಾಡಬೇಕು ಎಂಬುದನ್ನು ಶಿಕ್ಷಕರು ಆ ಗ್ರೂಪ್‌ನಲ್ಲಿ ಸೂಚಿಸುತ್ತಾ ಹೋಗುತ್ತಾರೆ. ಮಕ್ಕಳಿಗೆ ಏನಾದರೂ ಸಮಸ್ಯೆ ಎದುರಾದರೆ ಆ ಗ್ರೂಪ್‌ನಲ್ಲಿಯೇ ಪ್ರಶ್ನಿಸಿ, ಪರಿಹಾರ ಪಡೆಯುತ್ತಾರೆ. ಮಾದರಿ ಪ್ರಶ್ನೆ ಪತ್ರಿಕೆಗಳನ್ನೂ ಈ ಗ್ರೂಪ್‌ನಲ್ಲಿ ಹಾಕಿ, ಬಿಡಿಸುವಂತೆ ವಿದ್ಯಾರ್ಥಿಗಳಲ್ಲಿ ಹುರುಪು ತುಂಬುವ ಕೆಲಸವನ್ನು ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಶಿಕ್ಷಕರು ಮಾಡುತ್ತಿದ್ದಾರೆ.

ಶಾಲೆಗಳು ಪುನರಾರಂಭವಾದ ಮೇಲೂ ಆನ್‌ಲೈನ್ ಶಿಕ್ಷಣ ಏರುಗತಿಯಲ್ಲಿಯೇ ಹೆಜ್ಜೆ ಹಾಕಲಿದೆ ಎನ್ನುವುದು ನಿಸ್ಸಂಶಯ.

ಕೊರೊನಾ ಭೀತಿಯಿಂದ ಜಗತ್ತಿನ ಸರಿಸುಮಾರು ಶೇ. 90ಕ್ಕಿಂತ ಹೆಚ್ಚಿನ ದೇಶಗಳಲ್ಲಿ ಶಾಲಾಕಾಲೇಜುಗಳು ಕೆಲವು ವಾರಗಳ ಮಟ್ಟಿಗೆ ಕದ ಮುಚ್ಚಿದ್ದರಿಂದ 77 ಕೋಟಿ ವಿದ್ಯಾರ್ಥಿಗಳು ಮನೆಗಳಲ್ಲೇ ಉಳಿಯುವಂತಾಗಿದೆ. ಸೋಂಕಿನ ಭೀತಿ ತಂದಿಟ್ಟ ಈ ಅವಸ್ಥೆ ಉಳಿದ ವಲಯಗಳಿಗೆ ಸಹಿಸಲು ಅಸಾಧ್ಯ ಎನಿಸುವಂತಹ ಬಿಸಿ ಮುಟ್ಟಿಸಿದರೆ, ಆನ್‌ಲೈನ್ ಶಿಕ್ಷಣ ಉದ್ಯಮಕ್ಕೆ ಮಾತ್ರ ಅವಕಾಶಗಳ ಹೆಬ್ಬಾಗಿಲನ್ನೇ ತೆರೆದು ತಂಪೆರೆದಿದೆ. ಮನೆಗಳಲ್ಲಿರುವ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ವ್ಯವಸ್ಥೆ ಮಾಡದಿದ್ದರೆ ಅವರೆಲ್ಲಿ ತಮ್ಮ ಸಂಸ್ಥೆಯಿಂದ ಕೈತಪ್ಪುವರೋ ಎಂಬ ಭೀತಿಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಇದೀಗ ಆನ್‌ಲೈನ್ ಕೋರ್ಸ್ ನಡೆಸಲು ಮುಗಿಬಿದ್ದಿವೆ. ವಿದ್ಯಾರ್ಥಿಗಳ ಮನೆಗಳಲ್ಲೇ ಬೋಧನೆ ನಡೆಯಬೇಕಾದ ಸದ್ಯದ ಸವಾಲನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯವನ್ನೂ ಗಳಿಸಿಕೊಳ್ಳುತ್ತಿವೆ. ಅವುಗಳ ನೆರವಿಗೆ ನಿಂತಿರುವುದು ತಂತ್ರಜ್ಞಾನ ಆಧಾರಿತ ಶಿಕ್ಷಣದ ಸ್ಟಾರ್ಟ್ ಅಪ್‌ಗಳು. ಈಗ ಸಿಕ್ಕಿರುವ ಅವಕಾಶವನ್ನು ಅಂತಹ ಸ್ಟಾರ್ಟ್‌ಅಪ್‌ಗಳು ಎರಡೂ ಕೈಗಳಿಂದ ಬಾಚಿಕೊಳ್ಳುತ್ತಿದ್ದು, ಆನ್‌ಲೈನ್ ಶಿಕ್ಷಣದ ಉದ್ಯಮ ಬೃಹತ್ ಗಾತ್ರದಲ್ಲಿ ಬೆಳೆಯುತ್ತಿದೆ.

### ಶಿಕ್ಷಣದ ಹೊಸ ಶಕೆ

ಸಂಕಷ್ಟದ ಈ ಸಮಯವನ್ನು ಹೊಸ ಶಿಕ್ಷಣ ಶಕೆಯೊಂದರ ಆರಂಭ ಎಂದೂ ಕರೆಯಬಹುದೇನೋ? ಭಾರತೀಯ ಸಮಾಜ ಈಗ ಆನ್‌ಲೈನ್ ಕಲಿಕೆಯ ಕುರಿತು ಅಷ್ಟೊಂದು ಗಂಭೀರವಾಗಿ ಯೋಚಿಸಲು ಆರಂಭಿಸಿದೆ. ಪ್ರತಿವರ್ಷ ಆರು ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣಕ್ಕಾಗಿ ವಿದೇಶಗಳಿಗೆ ಹಾರುತ್ತಿದ್ದರು. ಆದರೆ, ಸದ್ಯದ ಭವಿಷ್ಯದಲ್ಲಿ ಯಾರೂ ವಿದೇಶದಲ್ಲಿ ಓದುವುದಕ್ಕೆ ತೆರಳುವ ಸ್ಥಿತಿಯಲಿಲ್ಲ. ಆನ್‌ಲೈನ್ ಶಿಕ್ಷಣ ಮುಂದಿನ ದಿನಗಳಲ್ಲಿ ಅನಿವಾರ್ಯ ಎನಿಸುವ ಎಲ್ಲ ಲಕ್ಷಣಗಳೂ ಗೋಚರಿಸತೊಡಗಿವೆ. ಆನ್‌ಲೈನ್ ಶಿಕ್ಷಣಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಈಗ ಒಂದು ನೀತಿ ಎಂಬುದೇ ಇಲ್ಲ. ಶಿಕ್ಷಣದ ಈ ನವ ಮನ್ವಂತರಕ್ಕೆ ಒಂದು ಸ್ಪಷ್ಟ ಸ್ವರೂಪ ಸಿಗಬೇಕಾದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಶಿಕ್ಷಣ ತಜ್ಞರು, ಉದ್ಯಮ ವಲಯದವರು ಹಾಗೂ ಅದರ ಪ್ರಧಾನ ಬಳಕೆದಾರರಾದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಈ ಪ್ರಕ್ರಿಯೆಯಲ್ಲಿ ಒಳಗೊಳ್ಳುವ ಅಗತ್ಯವಿದೆ. ಪ್ರತಿಯೊಂದು ಶಾಲೆಗೂ ಬೇಕಾದ ಲೈವ್ ಸ್ಟ್ರೀಮ್ ಸೌಲಭ್ಯ, ಶಿಕ್ಷಕರು ನಿರಂತರವಾಗಿ ಆನ್‌ಲೈನ್ ಬೋಧನೆಗೆ ಸಿಗುವಂತೆ ನೋಡಿಕೊಳ್ಳುವ ವ್ಯವಸ್ಥೆ, ಮನೆಯಲ್ಲಿ ಸುಲಭವಾಗಿ ಆನ್‌ಲೈನ್ ಪಾಠ ತೆಗೆದುಕೊಳ್ಳಲು ಸಾಧ್ಯವಾಗುವಂತಹ ತಂತ್ರಜ್ಞಾನದ ಅಭಿವೃದ್ಧಿ... ಹೀಗೆ ಹಲವು ಕೆಲಸಗಳು ಆಗಬೇಕಿವೆ.